ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ಮಾನ್ಯ ಸಭಾಧ್ಯಕ್ಷರು

ಪತ್ರಿಕೆಯ ಹೆಸರು : NAME OF THE NEWS PAPER : ಸಂಯುಕ್ತ ಕರ್ನಾಟಕ ದಿನಾಂಕ : DATE : 7/7/19

# ಸ್ಪೀಕರ್ ನಿರ್ಧಾರದ ನಿರೀಕ್ಷೆ

ದಿ: 7-7-19

ಹನ್ನೊಂದು ಶಾಸಕರ ರಾಜೀನಾಮೆಯ ವಿಷಯ ಈಗ ವಿಧಾನ ಸಭಾಧ್ಯಕ್ಷರ ಅಂಗಳದಲ್ಲಿದೆ.

ಸಂವಿಧಾನಾತ್ಮಕವಾಗಿ ವಿಧಾನಸಭಾಧ್ಯಕ್ಷ ಹುದ್ದೆಯು ದಿನದ ಇಪ್ಪತ್ನಾಲ್ಕು ಗಂಟೆಗಳ ಕಾಲವೂ ಕಾರ್ಯನಿರತವಾಗಿರುವಂತಹದು. ಶಾಸಕರೆಲ್ಲರೂ ಸಭಾಧ್ಯಕ್ಷರ ಅಧಿಕೃತ ಕೊಠಡಿಗೆ ಆಗಮಿಸಿ ಅವರ ಅಧಿಕೃತ ಕಾರ್ಯದರ್ಶಿ ಕೈಯಲ್ಲಿ ನೀಡಿರುವುದರಿಂದ ಶಾಸಕರು ರಾಜೀನಾಮೆ ನೀಡುವ ಪ್ರಕ್ರಿಯೆ ಸಂವಿಧಾನಾತ್ಮಕವಾಗಿಯೇ ಪೂರ್ಣಗೊಂಡಂತಾಗಿದೆ. ಇನ್ನುಳಿರುವುದು ಸಭಾಧ್ಯಕ್ಷರ ವಿವೇಚನಾಧಿಕಾರಕ್ಕೆ ಒಳಪಟ್ಟಿದೆ. ಸಭಾಧ್ಯಕ್ಷರು ಶಾಸಕರು ಆಮಿಷಕ್ಕೊಳಗಾಗಿದ್ದಾರೆಂಬ ಸಂಶಯಕ್ಕೆ ಎಡೆ ಮಾಡಿಕೊಟ್ಟಲ್ಲಿ ಶಾಸಕರನ್ನು ಒಬ್ಬೊಬ್ಬರಾಗಿ ಕರೆದು ಕಾರಣ ಕೇಳಬಹುದು. ತದನಂತರ ರಾಜೀನಾಮೆ ಅಂಗೀಕರಿಸಬಹುದು. ಆದರೆ, ರಾಜೀನಾಮೆ ತಿರಸ್ಕರಿಸುವ ಪ್ರಮಾದಗಳೇನೂ ಪ್ರಸ್ತುತ ಹಂತದಲ್ಲಿ ಕಂಡುಬಂದಿಲ್ಲ. ಹಾಗೊಮ್ಮೆ ಬಹುದಿನಗಳ ಕಾಲ ರಾಜೀನಾಮೆ ಸ್ವೀಕರಿಸದೇ ಇದ್ದಲ್ಲಿ ಆಗ ಮತ್ತೊಮ್ಮೆ ಮನವಿ ಮಾಡಿಕೊಳ್ಳಲು ಅವಕಾಶವಿದೆ. ರಾಜ್ಯಪಾಲರಿಗೂ ಸಭಾಧ್ಯಕ್ಷರ ಧೋರಣೆ ವಿರುದ್ಧ ದೂರು ನೀಡಲು ಅವಕಾಶವಿದೆ.

ಆಗ ರಾಜ್ಯಪಾಲರು ಸಭಾಧ್ಯಕ್ಷರಿಗೆ ರಾಜೀನಾಮೆ ಸ್ವೀಕರಿಸದೇ ಇರುವ ಬಗ್ಗೆ ಉತ್ತರ ಬಯಸಬಹುದೇ ಹೊರತು, ರಾಜೀನಾಮೆ ಅಂಗೀಕರಿಸುವ ಮತ್ತು ತಿರಸ್ಕರಿಸುವ ಪರಮಾಧಿಕಾರ ಸಭಾಧ್ಯಕ್ಷರ ವಿವೇಚನಾಧಿಕಾರಕ್ಕೆ ಒಳಪಟ್ಟಿರುತ್ತದೆ.



## ಮಾಧ್ಯಮಗಳ ಮೇಲೆ ಗರಂ

ಹದಿಮೂರು ಶಾಸಕರು ರಾಜೀನಾಮೆ ನೀಡಲು ಬರುತ್ತಿದ್ದಾರೆ ಎಂಬ ಸುಳಿವು ದೊರೆಯುತ್ತಿದ್ದಂತೆ ವಿಧಾನಸೌಧದ ತಮ್ಮ ಕಚೇರಿಯಿಂದ ಹೊರನಡೆದಿದ್ದ ಸ್ಪೀಕರ್ ರಮೇಶ್ ಕುಮಾರ್ ಅವರು ಮಾಧ್ಯಮಗಳ ಮೇಲೆ ಕೆಂಡಾಮಂಡಲವಾಗಿದ್ದಾರೆ. ಮೈತ್ರಿ ಸರಕಾರ ಅಲುಗಾಡುವಂಥ ಬೆಳವಣಿಗೆಗಳು ನಡೆಯುತ್ತಿದ್ದರೂ, ಸರಕಾರದ ಪರ ವಹಿಸಿಕೊಂಡು ಮಾತನಾಡುತ್ತಿದ್ದ ಅವರು, ಅಲ್ಲಿಂದ ತಮ್ಮ ಬಂಧುಗಳೊಬ್ಬರನ್ನು ಜಯದೇವ ಆಸ್ಪತ್ರೆಗೆ ದಾಖಲು ಮಾಡಿರುವುದು ತಿಳಿದು ಅಲ್ಲಿಗೆ ತೆರಳಿದರು. ಅಲ್ಲೂ ಸಹಾ ಮಾಧ್ಯಮದವರ ಮೇಲೆ ರೇಗಿದರು.

2